ಅಧ್ಯಕ್ಷರು.—ಪ್ರಸ್ತಾವ ಏನೆಂದರೆ:—

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಭಾಗವಾಗಿರುತ್ತವೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾಪದ ಅಂಗೀಕಾರ

ಶ್ರೀ ಹೆಚ್. ಟಿ. ಕೃಷ್ಣಪ್ಪ.—''೧೯೮೬ನೇ ಇಸವಿಯ ಕರ್ನಾಟಕ ಅಕ್ಷಿಪಟಲಗಳ ಜೋಡಣೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ:—

''೧೯೮೬ನೇ ಇಸವಿಯ ಕರ್ನಾಟಕ ಅಕ್ಷಿಪಟಲಗಳ ಜೋಡಣೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಕರ್ನಾಟಕ ಬದಲಿ ಮೂತ್ರ ಪಿಂಡಗಳ ವಿಧೇಯಕ ೧೯೮೬,

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಅಧ್ಯಕ್ಷರೇ, ಬದಲಿ ಮೂತ್ರಪಿಂಡಗಳ ಜೋಡಣೆಯ ಕರ್ನಾಟಕ ವಿಧೇಯಕ, ೧೯೮೬ನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಅಂಗೀಕಾರವಾಗಿರತಕ್ಕಂಥ ವಿಧೇಯಕದ ರೂಪರೇಷೆಗಳನ್ನು ಹೊಂದಿರತಕ್ಕಂಥದ್ದು ಇದು ಒಂದು ವಿಧೇಯಕ. ಇದೂ ಕೂಡ ಸುಗ್ರೀವಾಜ್ಞೆ ಮೂಲಕ ಈಗಾಗಲೇ ಜಾರಿಯಲ್ಲಿರತಕ್ಕಂಥದ್ದು. ಇದು ಸಶಕ್ತಿರತಕ್ಕಂಥ ಅಥವಾ ಸಾಯುವ ಸ್ಥಿತಿಯಲ್ಲಿರುವವರ ಮೂತ್ರ ಪಿಂಡಗಳನ್ನು ತೆಗೆದು ಯಾರು ಈ ರೋಗ ಗ್ರಸ್ಥರಾಗಿದ್ದಾರೆ, ಮತ್ತು ಮೂತ್ರ ಪಿಂಡಗಳ ಖಾಯಿಲೆಯಿಂದ ನರಳತಕ್ಕಂಥವರಿಗೆ ಜೋಡಿಸತಕ್ಕಂಥ ಸದುದ್ದೇಶ ಹೊಂದಿರತಕ್ಕಂಥ ಒಂದು ವಿಧೇಯಕ ಇದನ್ನು ಚರ್ಚೆ ಮಾಡತಕ್ಕಂಥ ವಿಷಯ ಇಲ್ಲ. ಅಕ್ಷಿಪಟಲಗಳ ನ್ಯೂನತೆಗಳನ್ನು ತಿದ್ದುಪಡಿ ಮೂಲಕ ಸರಿಪಡಿಸಿಕೊಳ್ಳುತ್ತೇವೆ. ಇದನ್ನು ಕೂಡ ತಾವು ಗಮನದಲ್ಲಿಟ್ಟುಕೊಂಡು ಇದಕ್ಕೂ ಕೂಡ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ: ''ಬದಲಿ ಮೂತ್ರಪಿಂಡಗಳ ಜೋಡಣೆಯ ಕರ್ನಾಟಕ ವಿಧೇಯಕ, ೧೯೮೬ನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ಪರ್ಯಾಲೋಚಿಸುವುದು

ಖಂಡ ೨ ರಿಂದ ೧೧ರ ವರೆಗೆ.—

ಅಧ್ಯಕ್ಷರು.—''ಖಂಡ ೨ ರಿಂದ ೧೧ ರವರೆಗೆ ವಿಧೇಯಕದ ಅಂಗವಾಗಿರುತ್ತದೆ''.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೧೧ರ ವರೆಗೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಮೊದಲನೆಯ ಖಂಡ ಹೆಸರು ಮತ್ತು ಅವತರಣಿಕೆ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ:—

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಭಾಗವಾಗಿರುತ್ತವೆ.

ಪ್ರಸ್ತಾಪವನ್ನು ಅಂಗೀಕರಿಸಲಾಯಿತು

(ಮೊದಲನೆ ಖಂಡ, ಹೆಸರು ಮತ್ತು ಅವತರಣಿಕೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಬದಲಿ ಮೂತ್ರ ಪಿಂಡಗಳ ಜೋಡಣೆಯ ಕರ್ನಾಟಕ ವಿಧೇಯಕ ೧೯೬೬ನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ.—

"ಬದಲಿ ಮೂತ್ರ ಪಿಂಡಗಳ ಜೋಡಣೆಯ ಕರ್ನಾಟಕ ವಿಧೇಯಕ ೧೯೬೬ರನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

೧೯೬೬ರ ಕರ್ನಾಟಕ ಲೋಕಾಯುಕ್ತ (ಎರಡನೆಯ ತಿದ್ದುಪಡಿ) ಮಸೂದೆ.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ಹಾಗೂ ಆಹಾರ ಮತ್ತು ನಾಗರೀ ಸರಬರಾಜು ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೬೬ರ ಕರ್ನಾಟಕ ಲೋಕಾಯುಕ್ತರ ಎರಡನೆಕ ತಿದ್ದುಪಡಿಯ ಮಸೂದೆಯನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು.—ಮಂಡಿಸಲಾಯಿತು.

ಶ್ರೀ ಎಂ. ಎಸ್. ಕೃಷ್ಣನ್.—ಕನ್ನಡದಲ್ಲಿ ಕೊಟ್ಟಿದ್ದಾರೆ. ಕನ್ನಡದಲ್ಲಿ ಓದಿದರೂ ಸಹಾ ಇದು ಬಹಳ ಕಠಿಣವಾಗಿದೆ. "ಕಬ್ಬಿಣದ ಕಡಲೆ ಇದ್ದ ಹಾಗೆ" ಇದೆ. ಇಂಗ್ಲೀಷ್‌ನಲ್ಲಿ ಮಾಡಿ ಕೊಡ ಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಮೂಲ ಮಸೂದೆಗಳನ್ನು ಕನ್ನಡದಲ್ಲೇ ಮಾಡಿದ್ದೇವೆ. ತಿದ್ದು ಪಡಿಯನ್ನೂ ಕನ್ನಡದಲ್ಲೇ ಮಾಡಿದ್ದೇವೆ.

ಅಧ್ಯಕ್ಷರು.—ಮಾನ್ಯ ಕೃಷ್ಣನ್ ಅವರೇ. ಅದು ಅಚ್ಚ ಕನ್ನಡದಲ್ಲಿಯೇ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರಷ್ಟು ಕನ್ನಡ ಪಂಡಿತ ನಾನಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಸಾಮಾನ್ಯವಾದ ತಿದ್ದುಪಡಿಗಳನ್ನು ಆಡಳಿತಾತ್ಮಕ ದೃಷ್ಟಿಯಿಂದ ಮಾಡುವುದಕ್ಕೆ ಮುಖ್ಯವಾದಂಥ ಅಂಶಗಳನ್ನು ಮಾತ್ರ ಸಭೆಯ ಗಮನಕ್ಕೆ ತರುವುದಕ್ಕೆ ತಮ್ಮ ಅನುಮತಿಯನ್ನು ಕೋರುತ್ತೇನೆ. ಸೆಕ್ಷನ್ ೭ರ ಕ್ಲಾಸ್ ೩ರಲ್ಲಿ ಎರಡು ಮೂರು ತಿದ್ದುಪಡಿಗಳನ್ನು ಮಾಡಿದ್ದಾರೆ. ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತರು ಪಬ್ಲಿಕ್ ಸರ್ವೆಂಟ್ಸ್ ಬಗ್ಗೆ ಕಂಪ್ಲೇಂಟ್ ಇದ್ದಾಗ ಇಂಥ ವಿಷಯದ ಬಗ್ಗೆ ಸರ್ಕಾರದವರು ಇದನ್ನು ಪರಿಶೀಲನೆ ಮಾಡಬೇಕು ಎಂದು ಕೇಳಿದಾಗ ಅಂಥದ್ದನ್ನು ಕೂಡಾ ಲೋಕಾಯುಕ್ತರು ಮತ್ತು ಉಪಲೋಕಾಯುಕ್ತರು ಪರಿಶೀಲನೆ ಮಾಡಬಹುದು ಒಂದು. ಎರಡನೆಯದು, ಲೋಕಾಯುಕ್ತರು ಮತ್ತು ಉಪಲೋಕಾಯುಕ್ತರಿಗೆ ಆಡಳಿತಾತ್ಮಕ ವಿಷಯದಲ್ಲಿ ಕೆಲಸವನ್ನು ಹಂಚಿಕೊಳ್ಳುವ ವಿಚಾರದಲ್ಲಿ ಅವರಿಬ್ಬರಿಗೂ ಇರತಕ್ಕಂಥದ್ದರ ಬಗ್ಗೆ ಕೆಲವು ಸಾಮಾನ್ಯವಾದ ತಿದ್ದುಪಡಿಗಳು ಇವೆ. ಆಮೇಲೆ ಲೋಕಾಯುಕ್ತರು ರಜಾದಲ್ಲಿದ್ದಾಗ ಯಾರು ಕೆಲಸ ಮಾಡಬೇಕು ಎನ್ನುವುದರ ಬಗ್ಗೆ ಸ್ಪಷ್ಟವಾಗಿಲ್ಲ. ಅದಕ್ಕೆ ತಿದ್ದುಪಡಿಯನ್ನು ಇದರಲ್ಲಿ ತಂದಿದ್ದೇವೆ.